<u>ಸಾಕ್ಷಿಯನ್ನು ದಿನಾಂಕ:22.02.2024 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

**ಪಾಟೀ ಸವಾಲುಃಆರೋಪಿ ಪರ ಶ್ರೀ.ವೈ.ಆರ್.ಹೆಚ್. ವಕೀಲರಿಂದಃ**

ನನಗೆ ದ್ವಿಚಕ್ರ ವಾಹನ ಚಾಲನಾ ಪರವಾನಗಿ ಇರುತ್ತದೆ. ಅಪಘಾತವಾದ ಸಮಯಕ್ಕೆ ಚಾಲನಾ ಪರವಾನಗಿ ಚಾಲ್ತಿಯಲ್ಲಿತ್ತು. ಅದನ್ನು ಪೋಲಿಸರಿಗೆ ನೀಡಿರುತ್ತೇನೆ. ದ್ವಿಚಕ್ರ ವಾಹನ ನನ್ನ ಸ್ನೇಹಿತನ ವಾಹನವಾಗಿರುತ್ತದೆ. ಅವರ ಹೆಸರು ನನಗೆ ಗೊತ್ತಿಲ್ಲ. ಅಪಘಾತವಾದ ಸಮಯದಲ್ಲಿ ದ್ವಿಚಕ್ರ ವಾಹನ ದಲ್ಲಿ ನಾನು, ನನ್ನ ಹೆಂಡತಿ ಮತ್ತು ಮಗು ಇದ್ದೆವು. ನಾನು ಮತ್ತು ನನ್ನ ಹೆಂಡತಿ ಹೆಲ್ಮೇಟ್ ಧರಿಸಿದ್ದೆವು. ನನ್ನ ದೂರಿನಲ್ಲಿ ನಾನು ಮತ್ತು ನನ್ನ ಹೆಂಡತಿ ಹೋಗುತ್ತಿದ್ದುದ್ದನ್ನು ಬರೆಸಿರುತ್ತೇನೆ. ಮಗುವಿನ ವಿಚಾರ ಬರೆಸಿರುವುದಿಲ್ಲ. ಅಪಘಾತವಾದಾಗ ನಾವು ರಸ್ತೆಯ ಎಡಬದಿಗೆ ಬಿದ್ದಿರುತ್ತೇವೆ. ಆ ಸಮಯದಲ್ಲಿ ಮಗುವಿಗೆ ಪೆಟ್ಟಾಗಿರಲಿಲ್ಲ ನನಗೆ ಪೆಟ್ಟಾಗಿರುತ್ತದೆ. ಅಪಘಾತವಾದ ಟಾರ್ ರಸ್ತೆಗೂ ಪಕ್ಕದಲ್ಲಿದ್ದ ಮಣ್ಣಿನ ರಸ್ತೆಗೂ ಸುಮಾರು 2 ಅಡಿ ಎತ್ತರ ಅಂತರ ಇರುತ್ತದೆ. ಅಪಘಾತವಾದ ನಂತರ ಸುಮಾರು 3-4 ಜನ ಸೇರಿದ್ದರು. ಅಪಘಾತವಾದ ಸ್ಥಳದಲ್ಲಿ ಅಂಗಡಿ ಇರುವ ಬಗ್ಗೆ ನಾನು ಗಮನಿಸಿರುವುದಿಲ್ಲ. KSRTC ಬಸ್ ಯಾವ ವಾಹನವನ್ನು ಹಿಂದಿಕ್ಕಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತವಾಗಿದೆ ಎಂದು ಹೇಳುವ ಕಾಲದ ಮೊದಲು ನನ್ನ ಮುಂದೆ ಮತ್ತು ನನ್ನ ಹಿಂದೆ ಯಾವ ವಾಹನಗಳು ಹೋಗುತ್ತಿದ್ದೆವು ಎಂದು ನನಗೆ ಗೊತ್ತಿಲ್ಲ. ಟಾರ್ ರಸ್ತೆಯ ವಿಸ್ತೀರ್ಣ ಮತ್ತು ಫುಟ್ ಪಾತ್ ರಸ್ತೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ.

ಅಪಘಾತವಾದ ನಂತರ ಗಾಡಿ ಸ್ಥಳದಲ್ಲೇ ಇತ್ತು. ಗಾಡಿ ಚಲಾವಣೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅದನ್ನು ಯಾವ ವಾಹನದಿಂದ ಸಾಗಿಸಿರುತ್ತಾರೆ ಎಂದು ನನಗೆ

ಗೊತ್ತಿಲ್ಲ. ಅಪಘಾತವಾದ ಸಂದರ್ಭದಲ್ಲಿ KSRTC ಬಸ್ ಜಖಂ ಆಗಿತ್ತಾ ಇಲ್ಲವಾ ಎಂದರೆ ಸಾಕ್ಷಿಯು ಅದು ಗುದ್ದಿಕೊಂಡು ಹೊರಟು ಹೋಗಿದ್ದರಿಂದ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ನಂತರ ನಾನು ಪೋಲಿಸರಿಗೆ ಅಪಘಾತ ಪಡಿಸಿದ ಬಸ್ ನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಯಾವ ದಿನಾಂಕ ಮತ್ತು ಎಲ್ಲಿ ತೋರಿಸಿರುತ್ತೇನೆ ಎಂಬುದು ನನಗೆ ನೆನಪಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ದ್ವಿಚಕ್ರ ವಾಹನ ಅಲ್ಲೇ ಇತ್ತು. ಸದರಿ ದ್ವಿಚಕ್ರ ವಾಹನವನ್ನು ನಾನು ಹೋದ ಮೇಲೆ ತಂದಿರುತ್ತಾರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಚಾಸಾ.2 ರವರು ನನಗೆ ಪರಿಚಯವಿರುವುದಿಲ್ಲ. ಅಪಘಾತವಾದ ದಿನವೇ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ನೋಡಿಕೊಳ್ಳಲು ಯಾರೂ ಇರದ ಕಾರಣ ಅದೇ ದಿನ ದೂರು ನೀಡಿರುವುದಿಲ್ಲ. ಅಪಘಾತವಾದ ದಿನ ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ. ಆಸ್ಪತ್ರೆಯಲ್ಲಿರುವಾಗ ನಾನು ಪೋಲಿಸರಿಗೆ ಕರೆ ಮಾಡಿರುವುದಿಲ್ಲ. ವೈದ್ಯರು ತಿಳಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ KSRTC ಬಸ್ ನಂಬರ್ ನ್ನು ಬರೆಸಿರುತ್ತೇನೆ. ನಾನು ಹೇಳುವ ದಿನಾಂಕದಂದು ಯಾವುದೇ ಬಸ್ ನಿಂದ ಅಪಘಾತವಾಗಿಲ್ಲ ಆದರೆ, ನಾನೇ ಸ್ಕಿಡ್ ಆಗಿ ಮಣ್ಣಿನ ರಸ್ತೆಯ ಮೇಲೆ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದಲೇ ಸದರಿ ದಿನ ದೂರು ನೀಡಿರುವುದಿಲ್ಲ ಮತ್ತು ಆ ನಂತರ ಬೇರೆಯವರ ಮಾತು ಕೇಳಿಕೊಂಡು ಪರಿಹಾರಕ್ಕಾಗಿ KSRTC ಬಸ್ ವಿರುದ್ಧ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಅಪಘಾತಕ್ಕೂ, KSRTC ಬಸ್ ಗೂ ಮತ್ತು ಅರೋಪಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ಪಂಚನಾಮೆಯಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ , ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಪೋಲಿಸರು ಯಾರ ಯಾರ ಹೇಳಿಕೆ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಚಾಸಾ.2 ಮತ್ತು ಚಾಸಾ.4 ರವರ ಹೇಳಿಕೆ ಪಡೆದುಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್